ಅಸಲು ದಾವಾ ನಂ.8/2023 ಪಿಡಬ್ಲೂ : 1

ದಿನಾಂಕಃ 16-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಎನ್ ಎಮ್ ಹೆಚ್ ವಕೀಲರಿಂದಃ**

4. 1 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಏನು ಉದಾಹರಣೆ ಹಾಕಿದ್ದಾರೆ ನಾನು ಕೇಳಿ ತಿಳಿದುಕೊಂಡಿಲ್ಲ . ದಾವಾ ಆಸ್ತಿಯಲ್ಲಿ ನನಗೆ ಎಷ್ಟು ಹಕ್ಕು ಬರುತ್ತಿದೆಯೋ ಅಷ್ಟೇ ಹಕ್ಕು 1 ನೇ ಪ್ರತಿವಾದಿಗೂ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬರುವ ಪಾಲನ್ನು ವಿಂಗಡಿಸಿಕೊಡಲು ನಮ್ಮ ತಕರಾರು ಇದೆ. ನನ್ನ ಮೂಲ ಮನೆ ಕಾಗಾಲ ಮನೆ ನಂ. 69 ಎಂದರೆ ಸರಿ. ಹಿಂದೆ ಮನೆ ನಂ. 69 ರಲ್ಲಿ 1 ನೇ ಪ್ರತಿವಾದಿ ಕೂಡ ವಾಸ ಮಾಡಿ ಬಂದಿದ್ದರು ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೂ ಕೂಡ ¼ ಹಕ್ಕು ಇದೆ ಎಂದರೆ ಸರಿಯಲ್ಲ. ಬಹಳ ವರ್ಷಗಳ ಹಿಂದೆ ಮೂಲ ಮನೆಯ ಎಡಭಾಗದಲ್ಲಿ ನಾನು ಹಾಗೂ ಬಲಭಾಗದಲ್ಲಿ 1 ನೇ ಪ್ರತಿವಾದಿ ವಾಸವಾಗಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ಹಳೇಯ ಮನೆ ಬಿದ್ದು ಹೋಯಿತು , ನಾನು ಪಂಚಾಯತಿಗೆ ತಿಳಿಸಿದ್ದೆ , ಪಂಚಾಯತಿಯಿಂದ ಮನೆ ನನಗೆ ಮಂಜೂರಾಗಿರುತ್ತದೆ . ಸುಮಾರು 9-10 ವರ್ಷಗಳ ಹಿಂದೆ ಮನೆ ಟ್ಯಾಕ್ಸನ್ನು ನಾನೇ ತುಂಬುತ್ತಿದ್ದೆ . 1 ನೇ ಪ್ರತಿವಾದಿಯೇ ಕಾಗಾಲ ಗ್ರಾಮ ಪಂಚಾಯತಿಯಲ್ಲಿ ಮನೆ ಟ್ಯಾಕ್ಸನ್ನು ತುಂಬುತ್ತಿದ್ದರು ಎಂದರೆ ಸರಿಯಲ್ಲ. ಆ ಕಾರಣ 1 ನೇ ಪ್ರತಿವಾದಿಗೂ ಕೂಡ ಸದರಿ ಮನೆಯಲ್ಲಿ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ಹಿಂದೆ 1 ನೇ ಪ್ರತಿವಾದಿಗೆ ನಾನು ಮನೆ ಬಿಟ್ಟು ಹೋಗು ಎಂದು ತೊಂದರೆ ಕೊಟ್ಟಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮನೆ ನಂ . 69 ನನ್ನ ಸ್ವಂತ ಮನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ .

5. 1 ನೇ ಪ್ರತಿವಾದಿಗೆ ಮದುವೆ ಮಾಡಿ ಕೊಟ್ಟಿದ್ದು ಮಿರ್ಜಾನದಲ್ಲಿ ಎಂದರೆ ಸರಿ . 1 ನೇ ಪ್ರತಿವಾದಿ ನನ್ನ ಗಂಡನ ಅಕ್ಕ. ಅವರು ಮದುವೆ ಮಾಡಿಕೊಟ್ಟ ನಂತರ ಮಿರ್ಜಾನದಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಮನೆ ನಂ. 69 ರಲ್ಲಿ 1 ನೇ ಪ್ರತಿವಾದಿ 40 ವರ್ಷ ಇದ್ದರು. ಮಿರ್ಜಾನದಲ್ಲಿ 30 ವರ್ಷ

ಇದ್ದರು. ಕಾಗಲ ಮನೆ ನಂ. 69 ರಲ್ಲಿ ಮೊದಲು ಒಟ್ಟೂ 4 ಜನ ಇದ್ದರು. ಕಮಲಾ, ಸೀತಾ , ಅನಂತ, ಗಣಪತಿ ಇದ್ದರು. ನನ್ನ ಗಂಡ ಬಾಲ್ಯದಿಂದ ಇದೇ ಮನೆಯಲ್ಲಿ ಬೆಳೆದಿದ್ದು ಎಂದರೆ ಸರಿ . ನಮ್ಮ ಮೂಲ ಮನೆ ನೆಲಗಟ್ಟಿನಲ್ಲಿದೆ ಎಂದರೆ ಸರಿ . ಈ ನೆಲಗಟ್ಟಿನ ಮೇಲೆ ಪಂಚಾಯತಿಯವರು ಹೊಸ ಮನೆ ನಿರ್ಮಿಸಿದರು ಎಂದರೆ ಸರಿ . ಈ ಮನೆಯ ಬಲಬದಿಯಲ್ಲಿ 1 ನೇ ಪ್ರತಿವಾದಿ ವಾಸ ಮಾಡುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿ ಮನೆ ನನ್ನ ಹೆಸರಿಗೆ ಬಂದಿದೆ ಎಂದು ನುಡಿದಿರುತ್ತಾರೆ . ಮೂಲ ಮನೆ ಎರಡು ಭಾಗವಾಗಿರುವುದರಿಂದ 1 ನೇ ಪ್ರತಿವಾದಿಗೂ ಕೂಡ ಸಾಮಾಹಿಕ ಹಕ್ಕು ಇದೆ ಎಂದರೆ ಸರಿಯಲ್ಲ . ಮನೆ ನಂ. 69 ನನ್ನ ಸ್ವಯಾರ್ಜಿತ ಅಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

2 ರಿಂದ 8, 14 ರಿಂದ 22 ನೇ ಪ್ರತಿವಾದಿ ಪರ ವಕೀಲನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.